# ಸೋಣೆ ಸುಂದರಿ!

ಸೋಣೆ ಶ್ರಾವಣ ಮಾಸದಲ್ಲಿ ಹುಟ್ಟುವ ಗಿಡ. ಹೆಚ್ಚು ಮಳೆ ಬೀಳುವ ಕರಾವಳಿ, ಮಲೆನಾಡಿನಲ್ಲಿ ಶ್ರಾವಣ ಮಾಸದ ಪ್ರಾರಂಭದಲ್ಲಿ ಹಚ್ಚಹಸಿರಿನ ಮಧ್ಯೆ, ಚಿಕ್ಕ ಚಿಕ್ಕ ಗಿಡಗಳ ಮಧ್ಯೆ, ಕಲ್ಲುಗಳ ಸಂಧಿಗಳಲ್ಲಿ ಗುಲಾಬಿ ಬಣ್ಣದ ಹೂಗಳನ್ನು ಹೊತ್ತ ಈ ಸುಂದರಿ ಕಾಣಿಸಿಕೊಳ್ಳುತ್ತಾಳೆ. ತೆಳುವಾದ ಕೆಂಪು ಬಣ್ಣದ ಕಾಂಡ, ಪುಟ್ಟ ಪುಟ್ಟ ಉದ್ದನೆಯ ಎಲೆ, ಮೂರು ದಳದ ಪುಟ್ಟ ಹೂ. ಚಿಕ್ಕ ಮಕ್ಕಳು ಇದರ ದಂಟನ್ನು ಸ್ಲೇಟಿನ ಅಕ್ಷರವನ್ನು ಅಳಿಸಲು ಬಳಸುವುದು ರೂಢಿ. ಸಿಂಹ ಸಂಕ್ರಮಣದ ದಿನ ಬೆಳಿಗ್ಗೆ ಸ್ನಾನ ಮಾಡಿ, ಮನೆಯ ಹೊಸ್ತಿಲನ್ನ ಬರೆದು ಈ ಹೂವನ್ನು ಹಾಕುವುದುಂಟು. ಅಂದಿನಿಂದ ಸೋಣೆ ತಿಂಗಳು ಪ್ರಾರಂಭ ಎಂದರ್ಥ.

**– ಅಕ್ಷತಾ ಪಿ. ಅಡಿಗ, ಸಾಸ್ತಾನ**





# ಮಕ್ಕಳ ಚಿಕಿತ್ಸೆಗಾಗಿ ವೇಷ!

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ಗಣೇಶೋತ್ಸವ, ಕೃಷ್ಣಾಷ್ಟಮಿ ಮತ್ತು ದಸರಾ ಸಮಯದಲ್ಲಿ ವೈವಿಧ್ಯಮಯ ವೇಷಧಾರಿಗಳನ್ನು ಕಾಣಬಹುದು. ಆದರೆ ರವಿ ಕಟಪಾಡಿ ಎಂಬ ಯುವಕ ಕಳೆದ ನಾಲ್ಕು ವರ್ಷಗಳಿಂದ ವಿಭಿನ್ನ ವೇಷ ಧರಿಸಿ ಸುದ್ದಿಯಲ್ಲಿದ್ದಾರೆ. 70 ಯುವಕರ ಸಹಕಾರದೊಂದಿಗೆ ಕ್ಯಾನ್ಸರ್ ಮತ್ತಿತರ ವ್ಯಾಧಿಗಳಿಂದ ಬಳಲುತ್ತಿರುವ ಮಕ್ಕಳ ಚಿಕಿತ್ಸೆಗೆ ಹಣ ಸಂಗ್ರಹಿಸಿ ನೆರವಾಗುತ್ತಿದ್ದಾರೆ. ಕಳೆದ ವರ್ಷ ಸಂಗ್ರಹಿಸಿದ ಮೊತ್ತದಿಂದ 4 ಲಕ್ಷ ರೂಪಾಯಿ ಹಾಗೂ ಈ ವರ್ಷ 9 ಲಕ್ಷ ರೂಪಾಯಿ ಹಣವನ್ನು ಹಲವಾರು ಮಕ್ಕಳಿಗೆ ನೀಡಿದ್ದಾರೆ. ಅವತಾರ್, ಸ್ಪೈಡರ್ ಮ್ಯಾನ್, ಅಕ್ಟೋಪಸ್ ಮುಂತಾದ ವಿಚಿತ್ರ ಹಾಲಿವುಡ್ ಪಾತ್ರಗಳನ್ನು ಸೃಷ್ಟಿಸಲು ಸಾಕಷ್ಟು ಪೂರ್ವಸಿದ್ಧತೆ ಮತ್ತು ದೇಹಕ್ಕೆ ಹಾನಿಯಾದರೂ ಲೆಕ್ಕಿಸದೇ ತೋರಿದ ಸಾಮಾಜಿಕ ಕಳಕಳಿ ಶ್ಲಾಘನೀಯ!

**–ಜಗಜೀವನ್ ಶೆಟ್ಟಿ ಎಂ., ಉಡುಪಿ**

# ಸೂರಕ್ಕಿಯ ಸಂಸಾರ

ಒಮ್ಮೆ ಉದ್ಯಮಿ, ಅಂಕೋಲಾದ ಲಕ್ಷ್ಮೇಶ್ವರ ನಿವಾಸಿ ಡಿ.ಎನ್.ನಾಯಕ ಅವರ ಮನೆಗೆ ಹೋದಾಗ ಮನೆಯ ವರಾಂಡದಲ್ಲಿನ ಫ್ಯಾನಿಗೆ ಗೂಡು ಕಟ್ಟಿದ ಪುಟ್ಟ ಹಕ್ಕಿ ನನ್ನನ್ನು ಆಕರ್ಷಿಸಿತು. ಮನೆಯ ಅಂಗಳದಲ್ಲಿ ಸಿಗುವ ಹುಲ್ಲು, ಎಲೆ, ಬಳ್ಳಿ ಮೊದಲಾದವುಗಳನ್ನು ಬಳಸಿ ಗೂಡು ಕಟ್ಟಿದ ಈ ಹಕ್ಕಿಯನ್ನು ಸ್ಥಳೀಯವಾಗಿ ಸೂರಕ್ಕಿ ಎಂದು ಕರೆಯುತ್ತಾರೆ. ಅಮೆರಿಕಾ ಮೂಲದ ಹಮ್ಮಿಂಗ್ ಬರ್ಡ್ ಕುಟುಂಬಕ್ಕೆ ಸೇರಿದ ಈ ಹಕ್ಕಿ ಸಾಮಾನ್ಯವಾಗಿ ಹತ್ತು ಸೆಂಟಿ ಮೀಟರಿನಷ್ಟು ಉದ್ದವಿರುತ್ತದೆ.

ಗಂಡು ಸೂರಕ್ಕಿ ಹಸಿರು, ನೀಲಿ, ಕಂದು ಕೆಂಪು, ನೇರಳೆ ಬಣ್ಣ ಹೊದಿರುತ್ತದೆ. ಜನರ ವಾಸಸ್ಥಾನದ ಅಕ್ಕಪಕ್ಕದಲ್ಲಿಯೇ ಗೂಡು ಕಟ್ಟುವುದು ಸೂರಕ್ಕಿಯ ವೈಶಿಷ್ಟ್ಯ.

**–ಬೀರಣ್ಣ ನಾಯಕ, ಮೊಗಟಾ**

